**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ.795/2026.**

ದಿನಾಂಕಃ**06-07-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ರಾಜು ಕೆ ಜಿ | ಚಾಸಾ -14<br>ಪ್ರಾಸಾ -6 |
| ತಂದೆಯ ಹೆಸರು | ಗೋವಿಂದನಾಯ್ಕ | |
| ವಯಸ್ಸು (ವರ್ಷಗಳಲ್ಲಿ) | 54 | |
| ಉದ್ಯೋಗ | ಎ ಎಸ್ ಐ | |
| ವಾಸ | ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ಕಳೆದ 2 ವರ್ಷದಿಂದ ಕಡೂರು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ20.02.2026 ರಂದು ನಾನು ಪೊಲೀಸ್ ಠಾಣಾ ಪ್ರಭಾರದಲ್ಲಿ ಇದ್ದಾಗ ಬೆಳಗ್ಗೆ 8.15 ಗಂಟೆಗೆ ಚಾಸಾ 1 ರವರು ಹಾಜರುಪಡಿಸಿದನಿಪಿ 1 ರಂತೆ ದೂರನ್ನು ಸ್ವೀಕರಿಸಿ ಪ್ರಕರಣದ ದಾಖಲಿಸಿರುತ್ತೇನೆ ದೂರಿನಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು ಹಾಗೂ ಸದರಿ ಪ್ರ.ವ.ವರದಿಯನ್ನು ನಿಪಿ 22 ಎಂದು ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ-15 ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀ.ಹೆಚ್. ಎನ್. ಎಸ್ ವಕೀಲರಿಂದಃ

ನಿಪಿ 1 ದೂರನ್ನು ನಮ್ಮ ಠಾಣೆಯಲ್ಲಿ ತಯಾರಿಸಲಾಗಿದೆ ಎಂದರೆ ಸರಿಯಲ್ಲ. ದೂರಿನಲ್ಲಿ ಅಸೆಸ್ ಮೆಂಟ್ ಸಂಖ್ಯೆ ನಮೂದಿಸಿಲ್ಲವೆಂದರೆ ಸರಿ. ನಿಪಿ 1 ನ್ನು ಚಾಸಾ 1 ರವರಿಗೆ ಸಹಾಯವಾಗವಂತೆ ಸದವರಿಯವರೊಂದಿಗೆ ಶಾಮೀಲಾಗಿ ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮನೆಯಲ್ಲಿ ಯಾವುದೇ ಕಳ್ಳತನವಾಗಿರದಿದ್ದರು ಸುಳ್ಳು ಪ್ರ ವ ವರದಿ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.